ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**

**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/80/2012-13/79 ದಿನಾಂಕ : 23.05.2014

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ದಾವಣಗೆರೆ.

ಮಾನ್ಯರೇ,

***ವಿಷಯ:*** ನಿರ್ಮಲ ಭಾರತ್ ಅಭಿಯಾನ ಯೋಜನೆಯಡಿ ಐ.ಇ.ಸಿ. ಆಂದೋಲನಕ್ಕಾಗಿ ರೂ.73.35 ಲಕ್ಷಗಳನ್ನು ಬಿಡುಗಡೆ ಮಾಡಿರುವುದಕ್ಕೆ ಎದುರಾಗಿ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವ ಕುರಿತು.

***ಉಲ್ಲೇಖ:***
1. ಈ ಕಚೇರಿಯ ಬಿಡುಗಡೆ ಆದೇಶ ಸಮ ಸಂಖ್ಯೆ ದಿನಾಂಕ: 06.01.2014.
2. ಈ ಕಚೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 16.04.2014.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದಡಿ ಆರ್ಘ್ಯಂ ಸಂಸ್ಥೆಯ ಸಹಯೋಗದೊಂದಿಗೆ 50 ಗ್ರಾ.ಪಂ.ಗಳಲ್ಲಿ ಸಂವಹನ ಜಾಗೃತಿ ಕಾರ್ಯಕ್ರಮ ನಡೆಸಲು ರೂ.73.35 ಲಕ್ಷಗಳನ್ನು ಉಲ್ಲೇಖಿತ ಆದೇಶದನ್ವಯ Support Activitity ಲಭ್ಯವಿರುವ ಐ.ಇ.ಸಿ. ಅನುದಾನದಿಂದ ಬಿಡುಗಡೆ ಮಾಡಲಾಗಿರುತ್ತದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನಕ್ಕೆ ಎದುರಾಗಿ ಹಣಬಳಕೆ ಪ್ರಮಾಣ ಪತ್ರವನ್ನು ಕೇಂದ್ರ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದ್ದು ಈವರೆಗೆ ಸಲ್ಲಿಸಿರುವುದಿಲ್ಲ. ಉಲ್ಲೇಖ (2) ರ ಪತ್ರದನ್ವಯ ಅನುದಾನ ಬಳಸಿರುವ ಮೊತ್ತಕ್ಕೆ ಹಣಬಳಕೆ ಪತ್ರವನ್ನು ಸಲ್ಲಿಸಲು ಹಾಗೂ ಉಳಿದಿರುವ ಅನುದಾನವನ್ನು ಹಿಂದಿರುಗಿಸಲು ಕೋರಲಾಗಿರುತ್ತದೆ. ಆದರೆ ಈ ಬಗ್ಗೆ ದಿನಾಂಕ: 23.05.2014 ರಂದು ನೋಡಲ್ ಅಧಿಕಾರಿಯವರೊಂದಿಗೆ ಚರ್ಚಿಸಿದಾಗ ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ಹಿಂತಿರುಗಿಸುವಂತೆ ರಾಜ್ಯ ಕಚೇರಿಯಿಂದ ಪತ್ರದ ಮೂಲಕ ತಿಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿರುತ್ತಾರೆ. **ಮುಂದುವರೆದಂತೆ ಬಳಸಿರುವ ಅನುದಾನಕ್ಕೆ ಮಾತ್ರ ಹಣಬಳಕೆ ಪತ್ರ ನೀಡಲು ಮತ್ತು ಕಾರ್ಯಕ್ರಮ ಪೂರ್ಣಗೊಂಡ ನಂತರ ಹಣ ಉಳಿದಿದ್ದಲ್ಲಿ ಮಾತ್ರ ಹಿಂತಿರುಗಿಸಬೇಕೆಂಬ ವಿಷಯವನ್ನು ಸ್ಪಷ್ಟೀಕರಿಸಲಾಗಿದೆ.**

ತಮ್ಮ ವಿಶ್ವಾಸಿ,

**ಮಿಷನ್ ನಿರ್ದೇಶಕರ ಪರವಾಗಿ**
ರಾ.ನೀ.ನೈ.ಸಂಸ್ಥೆ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು :
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆರವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ/ ಫ್ಯಾಕ್ಸ್ :-22221862 E-mail : wsrdpr@gmail.com